'ಅಸ್ತು'ವಿನ ಇರಾಳಿಗೆ, ಮಗಳ ಹಟ ಸಹಜವೆನ್ನಿಸುತ್ತದೆ; ಅಪ್ಪನ ಹಟ ಸಹಿಸಿಕೊಳ್ಳುವುದು ಕಷ್ಟವೆನ್ನಿಸುತ್ತದೆ.

ಒಂದರ್ಥದಲ್ಲಿ ಆಧುನಿಕರೆಂದು ಕರೆದುಕೊಳ್ಳುವ ನಮ್ಮ ತಲೆಮಾರಿಗೇ ಮರೆವಿನ ಶಾಪ ತಾಕಿದಂತಿದೆ. ಯೌವನದ ಬಿಸುಪಿನಲ್ಲಿ, ಅನುದಿನದ ಅನಿವಾರ್ಯತೆಗಳ ಒತ್ತಡದಲ್ಲಿ ನಾವು ನಮ್ಮ ನೆನಪುಗಳನ್ನು ಬಿಟ್ಟುಕೊಡುತ್ತೇವೆ. ಹೊಸತಾಗಿ ಆವರಿಸಿಕೊಂಡ ಸಂಬಂಧಗಳ ಪ್ರಭಾವಳಿಯಲ್ಲಿ ಆವರೆಗೂ ನಮ್ಮನ್ನು ಪೋಷಿಸಿದ ಹಳೆಯ ನಂಟುಗಳನ್ನು ಮರೆಯುತ್ತೇವೆ ಅಥವಾ ನಿರ್ಲಕ್ಷಿಸುತ್ತೇವೆ. ಆಧುನಿಕತೆಯ ದೂರ್ವಾಸನ ಶಾಪದಿಂದ ಒದಗುವ ಈ ಮರೆವೆಯ ಕಾರಣದಿಂದಲೇ ಹಿರಿಯರು ಭಾರವೆನ್ನಿಸುತ್ತಾರೆ; ಹಳೆಯ ತಲೆಮಾರಿನವರು ಅನ್ನಿಸುತ್ತಾರೆ. ಆದರೆ, ನಮ್ಮ ಮರೆವೆ ನಮ್ಮರಿವಿಗೆ ಬರುವುದೇ ಇಲ್ಲ! ನಾವೆಲ್ಲ ಉಂಗುರವನ್ನು ಕಳೆದುಕೊಂಡ ಶಕುಂತಲೆ – ದುಷ್ಯಂತರಂತೆ ನಮಗೆ ತಿಳಿಯದೆಯೇ ಪರಿತಪಿಸುತ್ತಿರುತ್ತೇವೆ. 'ಅಸ್ತು' ಸಿನಿಮಾದ ಇರಾಳದು ಕೂಡ ಶಕುಂತಲೆಯ ಪರಿಸ್ಥಿತಿಯೇ. ಅಪ್ಪನ ಅನುಪಸ್ಥಿತಿ ಅವಳ ಪಾಲಿಗೆ ಅಭಿಜ್ಞಾನವಾಗಿ ಪರಿಣಮಿಸಿ, ನೆನಪುಗಳು ಮರುಕಳಿಸುತ್ತವೆ. ಆಗ ಆಕೆ ಅಪ್ಪನನ್ನು ನೋಡುವ ಕ್ರಮವೇ ಬೇರೆ.

ನೆನಪಿನ ಶಕ್ತಿ ಚೆನ್ನಾಗಿರುವವರಿಗೆ ಮರೆವಿನ ಲೇಬಲ್ ಅಂಟಿಸಿಕೊಂಡ ಅಜ್ಜ, ಬದುಕಿನ ಸತ್ಯಗಳನ್ನು ನೆನಪಿಸುವುದು ಸಿನಿಮಾದ ಅಪೂರ್ವ ಕ್ಷಣ. 'ತಾವೊ ಸಿದ್ಧಾಂತ' ಪ್ರತಿಪಾದಿಸುವ 'ಈ ಕ್ಷಣದಲ್ಲಿ ಬದುಕು'ವುದರ (ಲಿವಿಂಗ್ ಇನ್ ದಿ ಮೂಮೆಂಟ್) ಪ್ರಾಮುಖ್ಯತೆಯನ್ನು ಶಾಸ್ತ್ರಿಗಳು ನೆನಪಿಸುತ್ತಾರೆ. ಆದರೆ, ನಾವೆಲ್ಲ ನಮ್ಮ ವರ್ತಮಾನಗಳಿಗೆ 'ಭೂತ'ದ ಭಾರಗಳನ್ನು ಹೊಂದಿಸಿಕೊಂಡಿರುವವರು. ವ್ಯಕ್ತಿಯೊಬ್ಬ ಈ ಕ್ಷಣದಲ್ಲಿ ಏನಾಗಿದ್ದಾನೆ ಎನ್ನುವುದರ ಜೊತೆಗೆ ಅವನು ಏನಾಗಿದ್ದ ಎನ್ನುವ ಬ್ಯಾಗೇಜ್ ಕೂಡ ನಮಗೆ ಮುಖ್ಯವಾಗುತ್ತದೆ.

ಒಂದು ಕಾಲಘಟ್ಟ ಅಥವಾ ತಲೆಮಾರಿಗೆ ಆವರಿಸಿರುವ ಮರೆವೆಯ ಶಾಪವನ್ನು ಚಕ್ರಪಾಣಿ ಶಾಸ್ತ್ರಿಗಳು ಬೆಟ್ಟು ಮಾಡುತ್ತಿದ್ದಾರೆ. ಚೆನ್ನಮ್ಮನಂಥವರಿಗೆ ಈ ಶಾಪದ ಭಯ ಇಲ್ಲ. ಭಾರತೀಯ ಸಾಮಾಜಿಕ ವ್ಯವಸ್ಥೆ ಪ್ರತಿಪಾದಿಸುವ ಅಂತಃಕರಣದ ಕೂಸು ಆಕೆ. ಎಲ್ಲಿ ಅಂತಃಕರಣ ಜಾಗೃತವಾಗಿರುತ್ತದೋ ಅಲ್ಲಿ ಮರೆವೆ ಸಮಸ್ಯೆಯಾಗಿ ಪರಿಣಮಿಸುವುದಿಲ್ಲ. ಚೆನ್ನಮ್ಮನಿಗೆ ಈಗಾಗಲೇ ಮಗುವಿದೆ. ತನ್ನ ಕುಟುಂಬದ ಜೀವನಾಧಾರವಾದ ಆನೆಯಲ್ಲಿಯೂ ಅವಳಿಗೆ ಕೂಸು ಕಂಡಿದೆ. ಈಗ ಕುಟುಂಬಕ್ಕೆ ಸೇರಿಕೊಂಡ ಹೊಸ ಸದಸ್ಯ ಶಾಸ್ತ್ರಿಗಳನ್ನು ಮಗುವೆಂದು ಭಾವಿಸಲು ಕೂಡ ಅವಳಿಗೇನೂ ಕಷ್ಟವಿಲ್ಲ. 'ನಮ್ಮ ಮಗು' ಎನ್ನುವ ಭಾವದಿಂದಲೇ ಗಲೀಜಾದ ಅವರ ಪೈಜಾಮ ತೊಳೆಯುತ್ತಾಳೆ. ಸಹಜವಾಗಿ ಅಮ್ಮನಾಗಬೇಕಿದ್ದ ಮಗಳು – ಮೊಮ್ಮಗಳು ನಿರ್ವಹಿಸಲು ಸೋತ ಪಾತ್ರವನ್ನು ಚೆನ್ನಮ್ಮ ನಿಭಾಯಿಸುತ್ತಾಳೆ. ಹೊಸ ಮಗು 'ಹಸಿವು' ಎಂದಾಗ, 'ನಿನ್ನ ಅಮ್ಮ ಬಡವಳು' ಎಂದು ಕಣ್ಣು ತುಂಬಿಕೊಂಡೇ ಉಳಿದ ರೊಟ್ಟಿಯನ್ನು ಕೊಡುವ ಸಹಜ ತಾಯ್ತನ ಅವಳದು. ಇನ್ನೊಂದೆಡೆ ಅವಳಿಗೆ ಶಾಸ್ತ್ರಿಗಳ ವಿದ್ವತ್ತಿನ ಪರಿಚಯವೂ ಇದೆ. ಅವರ ಮುಖದ ವರ್ಚಸ್ಸು ಹಾಗೂ ಮಾತು ಕೇಳಿದಾಗ, 'ಇವರೊಬ್ಬ ದೊಡ್ಡ ಮನುಷ್ಯ' ಎಂದು ಆಕೆಗನ್ನಿಸಿದೆ. ತ್ರಿಮೂರ್ತಿಗಳಿಗೆ ಮೊಲೆಯುಣಿಸಿದ ಅನಸೂಯೆಯ ಅವ್ಯಾಜ ಮಾತೃಪ್ರೇಮದಲ್ಲಿ ಚೆನ್ನಮ್ಮ ಶಾಸ್ತ್ರಿಗಳನ್ನು ಸಲಹುತ್ತಾಳೆ.

ಚೆನ್ನಮ್ಮನಿಗೆ ಸುಲಭದಲ್ಲಿ ದಕ್ಕುವ ಮಗು, ಅವಳ ಗಂಡನಿಗೆ ತಕ್ಷಣಕ್ಕೆ ಗುರುತಾಗುವುದಿಲ್ಲ ಎನ್ನುವುದನ್ನು ಗಮನಿಸಬೇಕು. 'ಆನೆಯ ಮೇಲೆ ಕೂರಲಿಕ್ಕೆ ನೀನೇನು ಮಗುವಾ?' ಎಂದು